**ದಿನಾಂಕಃ27-01-2020 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿಗಳ ಪರ ಶ್ರೀ.ಕೆ.ಎನ್.ಎಂ., ವಕೀಲರಿಂದಃ**

ದಾವಾ ಆಸ್ತಿಯು ಮೂಲತಃ ಜಿ.ಡಿ ಚಾವ್ಡಾ ರವರಿಗೆ ಸೇರಿದ್ದಾಗಿರುತ್ತದೆ. ದಾವಾ ಆಸ್ತಿಯು ಮೂಲತಃ ಸ.ನಂ.138/1 ಮತ್ತು 138/3 ಸರ್ವೆ ನಂಬರ್ ಗಳ ಒಟ್ಟು ಆಸ್ತಿ 3 ಎಕರೆ 39 ಗುಂಟೆ ಜಿ.ಡಿ ಚಾವ್ಡಾರವರಿಗೆ ಸೇರಿದ್ದಾಗಿತ್ತು. ಸದರಿ ಆಸ್ತಿ ಜಿ.ಡಿ ಚಾವ್ಡಾರವರಿಗೆ ಕೆ.ಟಿ ಕೆಂಚಪ್ಪರವರಿಂದ ಬಂದಿರುತ್ತದೆ ಸರಿಯಾದ ಇಸವಿ ಗೊತ್ತಿರುವುದಿಲ್ಲ. ಸದರಿ ಪತ್ರವನ್ನು ನೋಡಿರುತ್ತೇನೆ. ಸದರಿ ಪತ್ರದಲ್ಲಿ ಆಸ್ತಿಯ ಚಕ್ಕುಬಂಧಿ ಏನು ಬರೆದಿತ್ತು ಎಂದು ಗೊತ್ತಿಲ್ಲ. ಸದರಿ ಆಸ್ತಿಯನ್ನು ಜಿ.ಡಿ ಚಾವ್ಡಾರವರು ಕೈಗಾರಿಕಾ ಪ್ರದೇಶವನ್ನಾಗಿ ಮಾಡಿದ್ದರು. ಆ ಬಗ್ಗೆ ನಾನು ದಾಖಲೆಗಳನ್ನು ನೋಡಿರುವುದಿಲ್ಲ. ಜಿ.ಡಿ ಚಾವ್ಡಾರವರು ಸದರಿ ಆಸ್ತಿಯ ಪೈಕಿ ಯಾವುದೇ ನಿವೇಶನಗಳನ್ನು ಮಾಡಿರುವುದಿಲ್ಲ.

ದಿಃ28-06-2006 ರಂದು ನನ್ನ ತಂಗಿ ಯಶೋಧಮ್ಮರವರು ದಾವಾ ಆಸ್ತಿಯನ್ನು ನನಗೆ ಮರಣ ಶಾಸನದ ಮುಖಾಂತರ ನೀಡಿರುತ್ತಾರೆ. ದಾವಾ ಆಸ್ತಿಯು ಜಿ.ಡಿ ಚಾವ್ಡಾರವರಿಂದ ನನ್ನ ತಂಗಿ ಯಶೋಧಮ್ಮರವರಿಗೆ ಬಂದಿರುತ್ತದೆ. ಜಿ.ಡಿ ಚಾವ್ಡಾರವರು ನನ್ನ ತಂಗಿ ಯಶೋದಮ್ಮರವರಿಗೆ ಮಾರಾಟ ಮಾಡಿದ ಆಸ್ತಿಯ ಅಸೆಸ್ ಮೆಂಟ್ ನಂಬರ್ 791 ಆಗಿದ್ದು, ದಕ್ಷಿಣ ಉತ್ತರ 280 ಅಡಿ, ಪೂರ್ವ ಪಶ್ಚಿಮ 308 ಅಡಿಗಳು ಇರುತ್ತದೆ. ಜಿ.ಡಿ ಚಾವ್ಡಾರವರು ದಾವಾ ಆಸ್ತಿಯನ್ನು ನನ್ನ ತಂಗಿ ಯಶೋದಮ್ಮರವರಿಗೆ ಮಾರಾಟ ಮಾಡಿದ ಕ್ರಯಪತ್ರವನ್ನು ಹಾಜರುಪಡಿಸಿರುವುದಿಲ್ಲ. ನನ್ನ ತಂಗಿ ಯಶೋದಮ್ಮರವರು ನನ್ನ ಹೆಸರಿಗೆ ಮಾಡಿದ ಮರಣ ಶಾಸನ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ನಾನು ಮೇಲೆ ಹೇಳಿದ

ಆಸ್ತಿಯ ವಿಸ್ತೀರ್ಣ ಪೂರ್ವ ಪಶ್ಚಿಮ 308 ಉತ್ತರ ದಕ್ಷಿಣ 280 ಅಡಿಗಳ ವಿಸ್ತೀರ್ಣಕ್ಕೂ ನಿಪಿ-2 ಮತ್ತು 3 ರಲ್ಲಿ ತಿಳಿಸಿರುವ ವಿಸ್ತೀರ್ಣಕ್ಕೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ.ಡಿ.ವಿ ಚಾವ್ಡಾರವರು ಯಶೋದಮ್ಮರವರಿಗೆ ಮಾರಾಟ ಮಾಡಿದ ಆಸ್ತಿಯ ಚಕ್ಕುಬಂಧಿ ಪೂರ್ವಕ್ಕೆ ಶಾಮೀಲ್, ಪಶ್ಚಿಮಕ್ಕೆ ಕೆ.ಎಂ. ರೋಡ್, ದಕ್ಷಿಣಕ್ಕೆ ಭಗವಾನ್ ಜಮೀನು, ಉತ್ತರಕ್ಕೆ ಕೆ.ಎಂ ರಸ್ತೆ ಇರುತ್ತದೆ. ಯಶೋದಮ್ಮರವರು ನಿಮಗೆ ಮರಣ ಶಾಸನ ಮಾಡಿದ ಚಕ್ಕುಬಂಧಿ ಏನುಎಂದರೆ ಸಾಕ್ಷಿಯು ಯಶೋದಮ್ಮರವರು ಖರೀದಿಸಿದ ಆಸ್ತಿಯೇ ಚಕ್ಕುಬಂಧಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಯಶೋದಮ್ಮರವರು ಚಾವ್ಡಾರವರಿಂದ ಖರೀದಿಸಿ ಬಗ್ಗೆ ಮತ್ತು ಯಶೋದಮ್ಮರವರು ನನಗೆ ಮರಣ ಶಾಸನ ಮಾಡಿದ ಬಗ್ಗೆ ದಾವಾ ದಾಖಲಿಸುವ ಸಮಯದಲ್ಲಿ ನಮ್ಮ ವಕೀಲರಿಗೆ ತಿಳಿಸಿರುತ್ತೇನೆ.

ಪೂರ್ವಕ್ಕೆ ಶಾಮೀಲ್, ಪಶ್ಚಿಮಕ್ಕೆ ಕೆ.ಎಂ. ರಸ್ತೆ, ಉತ್ತರಕ್ಕೆ ಕೆ.ಎಂ.ರಸ್ತೆ ಮತ್ತು ದಕ್ಷಿಣಕ್ಕೆ ಭೀರಪ್ಪರವರ ಆಸ್ತಿ ಈ ಮಧ್ಯೆ ಇರುವ ಆಸ್ತಿಯ ಸ್ವಾಧೀನದಲ್ಲಿ ಇದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಯಶೋದಮ್ಮರವರು ಆಸ್ತಿಯನ್ನು ಖರೀದಿಸಿದ ಖರೀದಿ ಪತ್ರವನ್ನು ಮತ್ತು ನನ್ನ ಹೆಸರಿಗಾದ ಮರಣ ಶಾಸನ ಪತ್ರವನ್ನು ಉದ್ದೇಶಪೂರ್ವಕವಾಗಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಈ-ಸ್ವತ್ತನ್ನು ಪುರಸಭೆಯಿಂದ ಪಡೆದಿರುತ್ತೇನೆ. ಸದರಿ ಈ ಸ್ವತ್ತನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಪೂರ್ವಕ್ಕೆ ಯಶೋದಮ್ಮ, ಪಶ್ಚಿಮಕ್ಕೆ ಕೊಲ್ಲಾರಿ ಮರುಳಯ್ಯ, ಉತ್ತರಕ್ಕೆ ಕೆ.ಎ ರಸ್ತೆ, ದಕ್ಷಿಣಕ್ಕೆ ಸಣ್ಣತಿಮ್ಮಯ್ಯರವರ ಆಸ್ತಿ ಈ ಮಧ್ಯೆ ಇರುವ ಆಸ್ತಿ ನನಗೆ ಸೇರಿದ ಆಸ್ತಿ ಅಲ್ಲ ಎಂದರೆ ಸರಿಯಲ್ಲ.ಸದರಿ ಚಕ್ಕುಬಂಧಿ ಮಧ್ಯೆ ಇರುವ ಆಸ್ತಿಯನ್ನು ಚಾವ್ಡಾರವರು 1 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯು 1 ನೇ ಪ್ರತಿವಾದಿಗೆ ಮಾರಾಟ ಮಾಡಿರುವ

ಆಸ್ತಿಯ ಮೇಲೆ ನನಗೆ ಹಕ್ಕುಅಧಿಕಾರ ಇಲ್ಲ ಎಂದರೆ ಸರಿ. ನನಗೆ ಮರಣ ಶಾಸನದ ಮುಖಾಂತರ ಬಂದ ಆಸ್ತಿಯ ವಿ ಸ್ತೀರ್ಣಕ್ಕೂ ನಾನು ವಾದಿಗಳಿಗೆ ಮಾಡಿರುವ ದಾನಪತ್ರದ ಆಸ್ತಿಯ ವಿಸ್ತೀರ್ಣಕ್ಕೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಚಾವ್ಡಾರವರಿಂದ ಖರೀದಿಸಿದ್ದರು ಎಂದರೆ ಸರಿ. ದಾವಾ ಆಸ್ತಿಯ ಮೂಲ ಸ.ನಂ.198/3 ಆಗಿದ್ದು ಅದರಲ್ಲಿ ಒಟ್ಟು 1 ಎಕರೆ 36 ಗುಂಟೆ ವಿಸ್ತೀರ್ಣವಿದ್ದು ಸದರಿ ಆಸ್ತಿ ನಿಂಗಮ್ಮ ಕೋಂ ಹೊನ್ನಪ್ಪರವರಿಗೆ ಸೇರಿದ್ದಾಗಿತ್ತು ಎಂದರೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ನಿಂಗಮ್ಮರವರು ಸಣ್ಣವೆಂಕಟಪ್ಪರವರಿಗೆ 1942 ರಲ್ಲಿ ಮಾರಾಟಮಾಡಿದ್ದರು ಎಂದರೆ ಗೊತ್ತಿಲ್ಲ. ಅದೇ ರೀತಿ ಸಣ್ಣವೆಂಕಟಪ್ಪರವರು ಪುರ್ವಕ್ಕೆ ಚಾವ್ಡಾರವರ ಜಮೀನು, ಪಶ್ಚಿಮಕ್ಕೆ ಕೊಲ್ಲಾರಿ ಮರುಳಯ್ಯ ರವರ ಜಮೀನು, ಉತ್ತರಕ್ಕೆ ಕೆ.ಎಂ ರಸ್ತೆ, ದಕ್ಷಿಣಕ್ಕೆ ಬೀರಪ್ಪರವರ ಜಮೀನು ಈ ಮದ್ಯೆ ಇರುವ ಆಸ್ತಿಯನ್ನು ಜಿ.ಡಿ ಚಾವ್ಡಾರವರಿಗೆ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ 1 ಎಕರೆ 36 ಗುಂಟೆ ಆಸ್ತಿಯನ್ನು ಜಿ.ಡಿ ಚಾವ್ಡಾರವರು 1962 ರಲ್ಲಿ ಅನ್ಯಕ್ರಾಂತ ಮಾಡಿಸಿದ್ದಾರೆ ಎಂದರೆ ಸರಿ. ಅಸೆಸ್ ಮೆಂಟ್ 791 ರಲ್ಲಿ ಕೆ.ಎಂ ರಸ್ತೆ ಕಡೆಯಿಂದ ಪೂರ್ವ ಪಶ್ಚಿಮ 272 ಅಡಿ, ಉತ್ತರ ದಕ್ಷಿಣ 280 ಅಡಿ ಆಸ್ತಿಯನ್ನು ಜಿ.ಡಿ ಚಾವ್ಡಾರವರು 4 ನೇ ಪ್ರತಿವಾದಿಗೆ 1972 ರಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಸರಿ. ನಂತರ ಜಿ.ಡಿ ಚಾವ್ಡಾರವರು 2015 ನೇ ಸಾಲಿನಲ್ಲಿ ಚಕ್ಕುಬಂಧಿ ತಿದ್ದುಪಡಿ ಮಾಡಿ ಕ್ರಯಪತ್ರ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ತಿದ್ದುಪಡಿ ಕ್ರಯಪತ್ರ 4 ನೇ ಪ್ರತಿವಾದಿ 1 ನೇ ಪ್ರತಿವಾದಿಗೆ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ದಾವಾ ಅಸ್ತಿಯ ಚಕ್ಕುಬಂಧಿಯಲ್ಲಿ ಪಶ್ಚಿಮಕ್ಕೆ ಕೆ.ಎಂ ರಸ್ತೆ ಎಂದು ತೋರಿಸಿದ್ದು ಪಶ್ಚಿಮದ ಕಡೆ ಕೆ.ಎಂ ರಸ್ತೆ ಬರುವುದಿಲ್ಲ ಎಂದರೆ ಸಾಕ್ಷಿಯು ಪಶ್ಚಿಮ ಮತ್ತು ಉತ್ತರ ಎರಡೂಕಡೆಗೆ ಕೆ.ಎಂ ರಸ್ತೆ ಇದೆ ಎಂದು ನುಡಿಯುತ್ತಾರೆ.

ನಿಪಿ-5 ದಾಖಲೆಯಲಲ್ಲಿ ದಾವಾ ಆಸ್ತಿಯ ಪಶ್ಚಿಮಕ್ಕೆ ಭಗವಾನ್ ಸಿಂಗ್ ರವರ ಆಸ್ತಿ ಎಂದು ನಮೂದು ಇದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ನಮೂದಿಸಿರುವ ಆಸ್ತಿಗೂ ನಿಪಿ-2 ರಿಂದ 5 ದಾಖಲೆಗಳಿಲ್ಲಿ ನಮೂದಿಸಿರುವ ಆಸ್ತಿಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಯಾವ ದಿಕ್ಕಿಗೆ 1 ನೇ ಪ್ರತಿವಾದಿಯ ಆಸ್ತಿ ಬರುತ್ತದೆ ಎಂದರೆ ಸಾಕ್ಷಿಯು ದಕ್ಷಿಣ ಉತ್ತರ ದಿಕ್ಕಿನಲ್ಲಿ ಬರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಮತ್ತು 1 ನೇಪ್ರತಿವಾದಿ ಆಸ್ತಿ ನಡುವೆ ಮೊದಲು ಬೇಲಿ ಇತ್ತು ಈಗ ಮುರಿದುಬಿದ್ದಿರುತ್ತದೆ. ದಾವಾ ಆಸ್ತಿಯಲ್ಲಿ ನಾವು ಸ್ವಾಧೀನಾನುಭವದಲ್ಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಆಸ್ತಿಗೆ ಯಾವುದೇ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಆಸ್ತಿಯನ್ನು ಲಪಟಾಯಿಸುವ ಸಲುವಾಗಿ ಸುಳ್ಳು ದಾವೆ ದಾಖಲಿಸಿದ್ದೇನೆಂದರೆ ಸರಿಯಲ್ಲ. ನಾನು ಪ್ರತಿವಾದಿಗಳ ಆಸ್ತಿಗೆ ತೊಂದರೆ ಕೊಟ್ಟ ಬಗ್ಗೆ ಪೊಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು ಎಂದರೆ ಸರಿ. ಪೊಲೀಸರು ವಾದಿ ಮತ್ತು ಪ್ರತಿವಾದಿಗಳಿಬ್ಬರಿಗೂ ಗಲಾಟೆಮಾಡಿಕೊಳ್ಳಬೇಡಿ ಎಂದು ತಿಳಿಹೇಳಿ ಕಳುಹಿಸಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ವಾದಿಗಳು ಮಾಲೀಕರಲ್ಲದಿದ್ದರೂ ಸಹ ಸುಳ್ಳು ದಾಖಲೆ ಸೃಷ್ಟಿಸಿ ಈ ದಾವೆ ದಾಖಲುಮಾಡಿದ್ದೇನೆಂದರೆ ಸರಿಯಲ್ಲ. ನಿಪಿ-6 ದಾನಪತ್ರ ಮಾಡುವ ಕಾಲಕ್ಕೆ ಸದರಿ ದಾನಪತ್ರದಲ್ಲಿ ತೋರಿಸಿರುವ ವಿಸ್ತೀರ್ಣದ ಆಸ್ತಿಯನ್ನು ಹೊಂದಿರಲಿಲ್ಲ ಎಂದರೆ ಸರಿಯಲ್ಲ.ನಿಪಿ-6 ದಾನಪತ್ರದಲ್ಲಿ ಸಹ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಭಗವಾನ್ ಸಿಂಗ್ ರವರ ಸ್ವತ್ತು ಎಂದು ನಮೂದು ಇದೆ ಎಂದರೆ ಸರಿ.

**<u>ಪಾಟೀ ಸವಾಲು: 4 ನೇ ಪ್ರತಿವಾದಿ ಪರ ಶ್ರೀ.ಎಸ್.ಆರ್.ಕೆ., ವಕೀಲರಿಂದ:</u>**

ನಾನು ದಾವಾ ಆಸ್ತಿಯ ಮಾಲೀಕನಲ್ಲ ಎಂದರೆ ಸರಿಯಲ್ಲ . ದಾವಾ ಆಸ್ತಿಗೆ 4 ನೇ ಪ್ರತಿವಾದಿ ಯಾವುದೇ ರೀತಿ ಮದ್ಯಪ್ರವೇಶ ಮಾಡಿಲ್ಲ, ತೊಂದರೆ ಕೊಟ್ಟಿಲ್ಲ ಮತ್ತು ಅಡ್ಡಿಪಡಿಸಿಲ್ಲ ಎಂದರೆ ಸರಿ. ನಾನು ಹಾಜರುಪಡಿಸಿರುವ ದಾಖಲೆಗಳು ಸುಳ್ಳಿನಿಂದ

ಕೂಡಿವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಬಗ್ಗೆ ದಿಃ12-12-2012 ರಲ್ಲಿ ನನ್ನ ಹೆಸರಿನಲ್ಲಿ ಇದ್ದ ಖಾತೆ ರದ್ದಾಗಿದೆ ಎಂದರೆ ಸಾಕ್ಷಿಯು ಅದಕ್ಕೂ ದಾವಾ ಆಸ್ತಿಗೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ನಿಪಿ-5 ರಲ್ಲಿ ತೋರಿಸಿರುವ ಆಸ್ತಿಯೇ ಬೇರೆ ಮತ್ತು ದಾವಾ ಆಸ್ತಿಯೇ ಬೇರೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ಯಾವುದೇ ತೊಂದರೆ ಕೊಡದಿದ್ದರೂ ಸುಳ್ಳು ದಾವೆ ದಾಖಲಿಸಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

(ದೀಪು ಎಂ.ಟಿ.)
3 ನೇ.ಹೆ.ದಿ.ನ್ಯಾ.& ಪ್ರಃದಃನ್ಯಾಃದಂ.,ರವರು,
ಕಡೂರು.